

# ಕ್ಯಾನ್ಸರ್ ಹೆಚ್ಚಳ; ತಜ್ಞರ ಕಳವಳ

ಐವತ್ತೈದು ವರ್ಷದ ಚಂದ್ರಮ್ಮ ಅವರಿಗೆ ತಂಬಾಕು ಹಾಕಿಕೊಳ್ಳುವ ಚಟ. ಮನೆಮಂದಿ ಎಷ್ಟೇ ಬೇಡ ಬೇಡವೆಂದರೂ ಅಭ್ಯಾಸ ಬಿಡಲು ಸುತಾರಾಂ ಇಷ್ಟವಿಲ್ಲ. ಇದರ ಪರಿಣಾಮ ಬಾಯಿ ಕ್ಯಾನ್ಸರ್ ಎಂಬ ಮಹಾಮಾರಿ ಅಡರಿಕೊಂಡದ್ದು.

ಇದು ಚಂದ್ರಮ್ಮ ಒಬ್ಬರ ಕಥೆಯಲ್ಲ. ಹಲವಾರು ಮಹಿಳೆಯರು ಇಂದು ತಂಬಾಕಿನಿಂದ ಬರುವ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ. ಹಿಂದೆಲ್ಲ ವರ್ಷಕ್ಕೆ ಐದಾರು ಕ್ಯಾನ್ಸರ್ ಪ್ರಕರಣಗಳು ಕಂಡುಬಂದರೆ ಹೌಹಾರುತ್ತಿದ್ದುದೂ ಉಂಟು. ಮೂರು ದಶಕಗಳ ಹಿಂದಿನ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಆಗ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ ಬೆರಳೆಣಿಕೆಯಷ್ಟೇ. 1990ರಲ್ಲಿದ್ದ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆಗೆ ಹೋಲಿಸಿದರೆ 2025ರಲ್ಲಿ ಇದರ ಪ್ರಮಾಣ ಗಣನೀಯವಾಗಿ ಹೆಚ್ಚಿದೆ.

ಪ್ರಮುಖವಾಗಿ ಬಾಯಿ, ಗಂಟಲು ಮತ್ತು ಶ್ವಾಸಕೋಶ ಕ್ಯಾನ್ಸರ್‌ಗಳ ಪ್ರಕರಣ ಗಣನೀಯವಾಗಿ ಹೆಚ್ಚಿದೆ ಎಂಬುದು ಸಾಬೀತಾಗಿದ್ದು ಕ್ಯಾನ್ಸರ್ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಈ ಮೂರೂ ವಿಧದ ಕ್ಯಾನ್ಸರ್‌ಗೆ ತಂಬಾಕು ಸೇವನೆಯೇ ಪ್ರಮುಖ ಕಾರಣ ಎಂಬುದು ಅಧ್ಯಯನದಿಂದ ಗೊತ್ತಾಗಿದೆ. ಈ ಪರಿಣಾಮವಾಗಿ ಇಂದು ಭಾರತ, ವಿಶ್ವದ ಕ್ಯಾನ್ಸರ್ ರಾಜಧಾನಿಯಾಗಿ ಹೊರಹೊಮ್ಮಿದೆ. ಈ ವಿಚಾರವನ್ನು ಈಚೆಗೆ ನಡೆದ ವಿಶ್ವ ಕ್ಯಾನ್ಸರ್ ದಿನಾಚರಣೆಯಲ್ಲಿ (ಫೆ. 4) ಕ್ಯಾನ್ಸರ್ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

**ತಂಬಾಕಿನಿಂದ ಬರುವ ಕ್ಯಾನ್ಸರ್ ಪ್ರಮಾಣ ಈಗ ಗಣನೀಯವಾಗಿ ಹೆಚ್ಚಿದೆ. ಬಾಯಿ, ಗಂಟಲು, ಶ್ವಾಸಕೋಶ ಕ್ಯಾನ್ಸರ್‌ಗಳು ತಂಬಾಕಿನ ಅತಿಯಾದ ಸೇವನೆಯ ಪರಿಣಾಮವೇ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.**

**ಉಮಾ ಅನಂತ್**

‘ವರ್ಷಗಳು ಕಳೆದಂತೆ ಜನಸಂಖ್ಯೆ ಹೆಚ್ಚಳ, ಜೀವನಶೈಲಿ ಬದಲಾವಣೆ, ಬದಲಾದ ಆಹಾರ ಶೈಲಿ, ಬೊಜ್ಜು, ವ್ಯಾಯಾಮದ ಕೊರತೆ, ಒತ್ತಡದ ಬದುಕಿನಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿವೆ. ಜೊತೆಗೆ ಮದ್ಯಪಾನ, ಧೂಮಪಾನ, ಅಮಲು ಪದಾರ್ಥಗಳ ಸೇವನೆಯಿಂದ ಈ ಮಾರಕ ರೋಗ ವಿಪರೀತ ಹೆಚ್ಚಳವಾಗುತ್ತಿದೆ. ತಂಬಾಕು ಸೇವನೆಯಿಂದ ಶ್ವಾಸಕೋಶ, ಬಾಯಿ ಮತ್ತು ಗಂಟಲಿನ ಕ್ಯಾನ್ಸರ್ ಬರುತ್ತಿದೆ. ಅಲ್ಲದೆ ಭಾರತದಲ್ಲಿ ಈ ಮೂರು ಕ್ಯಾನ್ಸರ್‌ಗಳ ಪ್ರಮಾಣ ಶೇ.40ರಷ್ಟಿದೆ’ ಎಂದು ವಿವರ ನೀಡುತ್ತಾರೆ ಬೆಂಗಳೂರಿನ ಸಂಪ್ರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ರಾಧೇಶಾಂ ನಾಯಕ್.

‘ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುತ್ತಿವೆ. ಆದರೂ ತಂಬಾಕು ಸೇವನೆ ಪ್ರಮಾಣ ಮಹಿಳೆಯರಲ್ಲಿ ಹೆಚ್ಚು. ಇದರಿಂದ ಪ್ರತಿ ಒಂದು ಲಕ್ಷ ಜನರಲ್ಲಿ 105 ಜನರಿಗೆ ಈ ಮಾರಕ ರೋಗ ಬರುತ್ತಿದೆ. ಅದೇ ಪುರುಷರಲ್ಲಿ ಪ್ರತಿ ಒಂದು ಲಕ್ಷ ಜನರಲ್ಲಿ 95 ಜನರಿಗೆ ರೋಗ ಕಾಣಿಸಿಕೊಳ್ಳುತ್ತಿದೆ’ ಎಂದು ಮಾಹಿತಿ ನೀಡುತ್ತಾರೆ ಈ ವೈದ್ಯರು.

‘ಭಾರತದಲ್ಲಿ ಕ್ಯಾನ್ಸರ್ ಚಿಕಿತ್ಸೆ ಹಲವಾರು ಸವಾಲುಗಳಿಂದ ಕೂಡಿದೆ. ರೋಗಿಗಳಲ್ಲಿ ಕ್ಯಾನ್ಸರ್ ಕಣಗಳ ಪತ್ತೆ ವಿಳಂಬವಾಗುತ್ತಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆ, ಕ್ಯಾನ್ಸರ್ ಬಗ್ಗೆ ಅರಿವಿನ ಕೊರತೆ, ಕ್ಯಾನ್ಸರ್ ಆರೈಕೆಯಲ್ಲಿ ಆಗುತ್ತಿರುವ ಕಷ್ಟಗಳು, ದುಬಾರಿ ಚಿಕಿತ್ಸಾ ವೆಚ್ಚ, ಅಸಮರ್ಪಕ ವಿಮೆ ವ್ಯವಸ್ಥೆ ಮತ್ತು ಚಿಕಿತ್ಸಾ ಶಿಷ್ಟಾಚಾರದಲ್ಲಿ ಅನಿಶ್ಚಿತತೆಗಳಂತಹ ಕಾರಣಗಳು ಕ್ಯಾನ್ಸರ್ ರೋಗ ನಿವಾರಣೆ ಮತ್ತು ನಿಯಂತ್ರಣಕ್ಕೆ ಬಹುದೊಡ್ಡ ಸವಾಲುಗಳಾಗಿವೆ’ ಎಂದು ಹೇಳುತ್ತಾರೆ ಇದೇ ಆಸ್ಪತ್ರೆಯಲ್ಲಿ ಪ್ರಿವೆಂಟಿವ್ ಆಂಕಾಲಾಜಿಸ್ಟ್ ಆಗಿರುವ ಡಾ. ವಿನೋದ್.

## ನಿವಾರಣೆ ಹೇಗೆ?

‘ಕ್ಯಾನ್ಸರ್ ಪ್ರಕರಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರಮುಖವಾಗಿ ಜೀವನಶೈಲಿ ಬದಲಾವಣೆ, ತಂಬಾಕು ಮತ್ತು ಮದ್ಯಪಾನ